ರಾಜ್ಯದಲ್ಲಿ ಮತ್ತು ಉಡುಪಿ ಜಿಲ್ಲೆಯಲ್ಲಿ ಕೈಗಾರಿಕೆಗಳಿಗೆ ಸಬ್ಸಿಡಿ ಹಣ ಪಾವತಿ ಮಾಡುವ ಬಗ್ಗೆ

2274 (2727) : ಶ್ರೀ ಗೋಪಾಲ ಬಂಡಾರಿ ಹೆಚ್. (ಕಾರ್ಕಳ) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಮತ್ತು ಉಡುಪಿ ಜಿಲ್ಲೆಯಲ್ಲಿ ಕೈಗಾರಿಕೆಗಳಿಗೆ ಒದಗಿಸಬೇಕಾದ ಸಬ್ಸಿಡಿ ಮೊತ್ತವೆಷ್ಟು; ಮತ್ತು ಎಷ್ಟು ವರ್ಷದಿಂದ ಬಾಕಿ ಇದೆ ವಿವರ ಒದಗಿಸುವುದು;

ಆ) ಅದನ್ನು ಒದಗಿಸಲು ಬೇಕಾಗಿರುವ ಸಮಯಾವಕಾಶ ಎಷ್ಟು;

ಇ) ಸಂಕಷ್ಟದಲ್ಲಿರುವ ಕೈಗಾರಿಕೆಗಳ ಪುನಃಶ್ಚೇತನಕ್ಕೆ ಏನಾದರೂ ಚಿಂತನೆ ಮತ್ತು ಕಾರ್ಯಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು)

ಅ) ರಾಜ್ಯದಲ್ಲಿ ದಿನಾಂಕ: 31.3.2003ರ ಅಂತ್ಯಕ್ಕೆ 18279 ಸಣ್ಣ ಕೈಗಾರಿಕಾ ಘಟಕಗಳಿಗೆ ರೂ. 405.67 ಕೋಟಿಗಳ ಸಹಾಯಧನವನ್ನು ನೀಡಬೇಕಾಗಿರುತ್ತದೆ. ಉಡುಪಿ ಜಿಲ್ಲೆಯಲ್ಲಿ ದಿನಾಂಕ: 1.1.1999 ರಿಂದ 31.3.2003ರ ಅಂತ್ಯಕ್ಕೆ ಒಟ್ಟು 905 ಕೈಗಾರಿಕೆಗಳಿಗೆ ರೂ. 16.53 ಕೋಟಿ ಸಹಾಯಧನ ನೀಡಲು ಬಾಕಿ ಇರುತ್ತದೆ.

ಆ) ಆದಷ್ಟು ಅದನ್ನು ಬೇಗನೆ ಈ ಹಣವನ್ನು ಬಿಡುಗಡೆ ಮಾಡಲು ತೀರ್ವವಾದ ಪ್ರಯತ್ನ ಮಾಡಲಾಗುತ್ತಿದೆ.

ಇ) ಹೊಸ ಕೈಗಾರಿಕಾ ನೀತಿ 2001ರಡಿಯಲ್ಲಿ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳ ಪುನಃಶ್ಚೇತನಕ್ಕಾಗಿ ಹಲವು ರಿಯಾಯಿತಿಗಳನ್ನು ಘೋಷಿಸಲಾಗಿದೆ. ಇವುಗಳಲ್ಲಿ ಮಾರ್ಜಿನ್ ಮನಿ ಮಂಜೂರಾತಿ ಯೋಜನೆ ಕೈಗಾರಿಕೆ ಮುಚ್ಚಲ್ಪಟ್ಟ ಅವಧಿಯಲ್ಲಿ ವಿಧಿಸಲಾಗುವ ಕೆ.ಪಿ.ಟಿ.ಸಿ.ಎಲ್. ಶುಲ್ಕ ವಿನಾಯ್ತಿ, ಪಾವತಿಸದೆ ಬಾಕಿ ಇರುವ ವಿದ್ಯುಚ್ಛಕ್ತಿ ಬಾಬ್ತನ್ನು 6 ಅರ್ಧವಾರ್ಷಿಕ ಸಮ ಕಂತುಗಳಲ್ಲಿ ಶೇ ಅರ್ಧದಷ್ಟು ಮಾಸಿಕ ಬಡ್ಡಿ ದರದಲ್ಲಿ ಪಾವತಿಸಲು ಅವಕಾಶ ಹಾಗೂ ಕೈಗಾರಿಕೆ ಮುಚ್ಚಲ್ಪಟ್ಟ ಅವಧಿಯಲ್ಲಿ ವಿದ್ಯುತ್ ದರ ಬಾಕಿ ಮೇಲೆ ವಿಧಿಸುವ ಬಡ್ಡಿ ಮನ್ನಾ ಮುಂತಾದವು ಪ್ರಮುಖ ಅಂಶಗಳಾಗಿರುತ್ತದೆ. ಜೊತೆಯಲ್ಲಿ ಹಣಕಾಸು ಸಂಸ್ಥೆಗಳು ನೀಡಿದ ಸಾಲ ಮತ್ತು ಬಡ್ಡಿ ಮೊತ್ತವನ್ನು ನವೀಕರಿಸಿದ ಕಂತುಗಳಲ್ಲಿ ಪಾವತಿಸಲು ಅವಕಾಶ ನೀಡಲು ನಿರೀಕ್ಷೆ ಇದೆ.

ಉಡುಪಿ ಜಿಲ್ಲೆಯ ಗಿರಿಜನ ಆಶ್ರಯ ಶಾಲೆಗಳಲ್ಲಿ ಖಾಲಿ ಇರತಕ್ಕ ಹುದ್ದೆಗಳನ್ನು ಭರ್ತಿ ಮಾಡುವುದು

2275 (2728) : ಶ್ರೀ ಗೋಪಾಲ ಬಂಡಾರಿ ಹೆಚ್. (ಕಾರ್ಕಳ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಗಿರಿಜನ ಆಶ್ರಮ ಶಾಲೆಗಳು ಎಷ್ಟು ಮತ್ತು ಎಲ್ಲಿ ಕಾರ್ಯನಿರ್ವಹಿಸುತ್ತಿವೆ: ವಿವರ ಒದಗಿಸುವುದು;

ಆ) ಇವುಗಳಲ್ಲಿ ಶಿಕ್ಷಕರ ಮತ್ತು ಸಿಬ್ಬಂದಿಗಳ ಹುದ್ದೆ ಎಷ್ಟು; ಹಾಗೂ ಇವುಗಳಲ್ಲಿ ಎಷ್ಟು ಖಾಲಿ ಇವೆ: (ಶಾಲಾವಾರು ಮಾಹಿತಿ ಒದಗಿಸುವುದು);

ಇ) ಸದರಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಉಡುಪಿ ಜಿಲ್ಲೆಯಲ್ಲಿ ಒಟ್ಟು 7 ಆಶ್ರಮ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.

	ಸ್ಥಳ	ತಾಲ್ಲೂಕು
1.	ಬನ್ನಂಜೆ	ಉಡುಪಿ
2.	ಕುಂದಾಪುರ	ಕುಂದಾಪುರ
3.	ಬೈಂದೂರು	ಕುಂದಾಪುರ
4.	ಆರ್ಡಿ	ಕುಂದಾಪುರ
5.	ಹೆಬ್ರಿ	ಕಾರ್ಕಳ
6.	ದುರ್ಗ	ಕಾರ್ಕಳ
7.	ಕಾರ್ಕಳ	ಕಾರ್ಕಳ

ಆ) ಒಟ್ಟು 52 ಹುದ್ದೆಗಳು ಇದ್ದು, (23 ಶಿಕ್ಷಕರ ಹಾಗೂ 29 ಶಿಕ್ಷಕೇತರ) ಅದರಲ್ಲಿ 29 ಹುದ್ದೆಗಳು ಭರ್ತಿ ಇರುತ್ತವೆ. 23 ಖಾಲಿ ಹುದ್ದೆಗಳ ಪೈಕಿ 14 ಉಪಾಧ್ಯಾಯರನ್ನು ತಿಂಗಳಿಗೆ 2250 ರೂ. ಸಂಬಳ ನೀಡಿ ಸರ್ಕಾರದಿಂದ ಹುದ್ದೆಗಳು ಭರ್ತಿ ಮಾಡುವವರೆಗೆ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಭರ್ತಿ ಮಾಡಿಕೊಳ್ಳಲಾಗಿದೆ. (ಅನುಬಂಧ ಲಗತ್ತಿಸಿದೆ)

ಇ) ಖಾಲಿ ಇರುವ ಶಿಕ್ಷಕರ ಹುದ್ದೆಗೆ ಶಿಕ್ಷಣ ಇಲಾಖೆಯಿಂದ ಶಿಕ್ಷಕರನ್ನು ನಿಯೋಜನೆ ಮೇಲೆ ನೇಮಿಸುವ ಪ್ರಸ್ತಾವನೆ ಇರುತ್ತದೆ.

ಅನುಬಂಧ–ಆ

ಕ್ರ. ಸಂ.	ಆಶ್ರಮ ಶಾಲೆ ವಿವರ	ಉಪಾಧ್ಯಾಯರು			ಅಡಿಗೆಯವರು			ಅಡಿಗೆಸಹಾಯಕರು			ಸ್ವಯಂ ಸೇವಾಸಂಘಗಳ ಮುಖಾಂತರ ಭರ್ತಿ ಮಾಡಿರುವ ಹುದ್ದೆಗಳು
		ಮಂಜೂರು	ಭರ್ತಿ	ಖಾಲಿ ಹುದ್ದೆ	ಮಂಜೂರು	ಭರ್ತಿ	ಖಾಲಿ ಹುದ್ದೆ	ಮಂಜೂರು	ಭರ್ತಿ	ಖಾಲಿ ಹುದ್ದೆ	
1	2	3	4	5	6	7	8	9	10	11	12
1.	ಬನ್ನಂಜೆ ಉಡುಪಿ ತಾಲ್ಲೂಕು	5	4	1	4	3	1	1	1	–	–
2.	ಕುಂದಾಪುರ	3	2	1	3	3	–	1	1	–	1
3.	ಬೈಂದೂರು ಕುಂದಾಪುರ ತಾ:	4	–	4	3	–	–	2	2	–	4
4.	ಆರ್ಡಿಕುಂದಾಪುರ	4	–	4	3	2	1	2	1	1	4
5.	ಹೆಬ್ರಿ ಕಾರ್ಕಳ	2	–	2	2	1	1	1	1	–	2
6.	ದುರ್ಗಾ ಕಾರ್ಕಳ ತಾಲ್ಲೂಕು	2	–	2	2	1	1	1	1	–	1
7.	ಕಾರ್ಕಳ ಕಾರ್ಕಳ ತಾಲ್ಲೂಕು	3	1	2	3	1	2	1	1	–	2
	ಒಟ್ಟು	**23**	**7**	**16**	**20**	**11**	**6**	**9**	**8**	**1**	**11**

ಒಟ್ಟು ಮಂಜೂರು – 52

ಭರ್ತಿ – 29

ಖಾಲಿ – 23 (ಇದರಲ್ಲಿ ಸ್ವಯಂ ಸೇವಾ ಸಂಸ್ಥೆಗಳಿಂದ 14 ಶಿಕ್ಷಕರನ್ನು ಮಾಸಿಕ ಸಂಭಾವನೆ ಆಧಾರದ ಮೇಲೆ ತೆಗೆದುಕೊಳ್ಳಲಾಗಿದೆ)